ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	187
ಸದಸ್ಯರ ಹೆಸರು :	ಶ್ರೀ ಕೆ.ಟಿ ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ :	22-09-2020
ಉತ್ತರಿಸುವವರು :	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿನ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್ ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು; (ವಿವರ ನೀಡುವುದು)	ರಾಜ್ಯದಲ್ಲಿನ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪೌರ ಕಾರ್ಮಿಕರ ಸಂಖ್ಯೆ-11988 (ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.)
ಆ	ಇದರಲ್ಲಿ ಖಾಯಂ ನೌಕರರು ಎಷ್ಟು; ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರೆಷ್ಟು;	ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ 6229, ಗುತ್ತಿಗೆ ನೌಕರರ ಸಂಖ್ಯೆ-54 ಮತ್ತು ಹೊರಗುತ್ತಿಗೆ (ನೇರಪಾವತಿ) ನೌಕರರ ಸಂಖ್ಯೆ- 5705, ಒಟ್ಟು ಪೌರ ಕಾರ್ಮಿಕರ ಸಂಖ್ಯೆ-11988
ಇ	ಇದರಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ನೀಡುತ್ತಿರುವ ವೇತನ ಎಷ್ಟು;	ನೇರ ಪಾವತಿ ಪೌರ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯ ಕನಿಷ್ಠ ವೇತನದ ಪ್ರಕಾರ ಮಾಸಿಕವಾಗಿ ವೇತನ ಪಾವತಿಸಲಾಗುತ್ತದೆ.
ಈ	ಸಮಾನ ಕೆಲಸಕ್ಕೆ ಸಮಾನ ವೇತನ ಪಾವತಿಸಲಾಗುತ್ತಿದೆಯೇ; ಇಲ್ಲವಾದಲ್ಲಿ, ಕಾರಣಗಳೇನು; (ವಿವರ ನೀಡುವುದು)	
ಉ	ಗುತ್ತಿಗೆ, ಹೊರಗುತ್ತಿಗೆ ನೌಕರರನ್ನು ಖಾಯಂ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಕರ್ನಾಟಕ ಪುರಸಭೆಗಳ (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2017 ರೀತ್ಯಾ ಪ್ರತಿ 700 ಜನಸಂಖ್ಯೆಗೆ ಒಬ್ಬರಂತೆ (ಪೌರಕಾರ್ಮಿಕರನ್ನು) ನಿಗದಿ ಗೊಳಿಸಲಾಗಿರುತ್ತದೆ. ಅದರಂತೆ ಈಗಾಗಲೇ 29 ಜಿಲ್ಲೆಗಳಲ್ಲಿ ಅಧಿಸೂಚನೆ

		ಹೊರಡಿಸಲಾಗಿರುತ್ತದೆ. ಬೆಳಗಾವಿ ಜಿಲ್ಲೆಯ ಒಟ್ಟು-32 ನಗರ ಸ್ಥಳೀಯ ಸಂಸ್ಥೆ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠವು ತಡೆಯಾಜ್ಞೆ ನೀಡಿರುತ್ತದೆ. ಅಧಿಸೂಚನೆ ಹೊರಡಿಸಿದ 255 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 201 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಕ್ರಿಯೆ ಪೂರ್ಣಗೊಂಡಿದ್ದು, 17 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಉಳಿದಂತೆ 37 ನಗರ ಸ್ಥಳೀಯ ಸಂಸ್ಥೆಗಳ ನೇಮಕಾತಿ ಸಂಬಂಧ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ. (ಬೆಳಗಾವಿ ಜಿಲ್ಲೆಯೂ ಒಳಗೊಂಡಂತೆ). ಈಗಾಗಲೇ 1968 ಪೌರಕಾರ್ಮಿಕರನ್ನು ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.

ಸಂಖ್ಯೆ: ನಅಇ 95 ಜಿಇಎಲ್ 2020

(ಡಾ: ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ನಗರಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ಮಾಹಿತಿ

ಅನುಬಂಧ-1

ಕ್ರ.ಸಂ	ಜಿಲ್ಲೆ ಹೆಸರು	ಒಟ್ಟು ಖಾಯಂ ಪೌರಕಾರ್ಮಿಕರ ಸಂಖ್ಯೆ	ನೇರ ಪಾವತಿ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ	ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಪೌರಕಾರ್ಮಿಕರ ಸಂಖ್ಯೆ
1	ಬೆಂಗಳೂರು ನಗರ	42	96	0	138
2	ಬೆಂಗಳೂರು ಗ್ರಾಮಾಂತರ	181	181	0	362
3	ರಾಮನಗರ	157	218	0	375
4	ಮಂಡ್ಯ	211	210	47	468
5	ಮೈಸೂರು	189	139	0	328
6	ತುಮಕೂರು	252	191	0	443
7	ಕೋಲಾರ	221	317	0	538
8	ಕೊಡಗು	64	34	0	98
9	ಚಿತ್ರದುರ್ಗ	183	157	0	340
10	ಹಾಸನ	251	198	0	449
11	ಚಿಕ್ಕಮಗಳೂರು	150	156	5	311
12	ದಕ್ಷಿಣ ಕನ್ನಡ	32	245	0	277
13	ಉತ್ತರ ಕನ್ನಡ	274	101	0	375
14	ಚಿಕ್ಕಬಳ್ಳಾಪುರ	199	152	0	351
15	ದಾವಣಗೆರೆ	146	86	0	232
16	ಉಡುಪಿ	152	160	0	312
17	ಗದಗ	228	156	0	384
18	ಧಾರವಾಡ	112	22	0	134
19	ಬಾಗಲಕೋಟೆ	320	387	0	707
20	ಬೀದರ್	277	141	2	420
21	ಬಿಜಾಪುರ	234	157	0	391
22	ಶಿವಮೊಗ್ಗ	202	185	0	387
23	ಕಲಬುರಗಿ	366	4	0	370
24	ಬೆಳಗಾವಿ	243	694	0	937
25	ರಾಯಚೂರು	326	308	0	634
26	ಹಾವೇರಿ	186	305	0	491
27	ಯಾದಗಿರಿ	274	87	0	361
28	ಕೊಪ್ಪಳ	195	228	0	423
29	ಚಾಮರಾಜನಗರ	126	148	0	274
30	ಬಳ್ಳಾರಿ	436	242	0	678
	ಒಟ್ಟು	**6229**	**5705**	**54**	**11988**